ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

SJ ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 31 ॥ ಸಂಚಿಕೆ : 22। UDP/1263/2021-23 || RNI.NO.50495/91 ॥ ತಾರೀಕು: 22–06–2021 ॥ ರೂ 5/– ॥ ವಾರ್ಷಿಕ ಚಂದಾ : 350/– ಅಂಚೆಯಲ್ಲಿ : 500/

## ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ

# ಕೊರೊನಾ ಗುಣಮುಖರಾದವರ ಆರೋಗ್ಯ ತಪಾಸಣೆ

### ಗಿಳಿಯಾರು ಕುಶಲ ಹೆಗ್ಡೆ ಟ್ರಸ್ಟ್ ಸಹಕಾರ

ಕೊರೊನಾ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿ ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದವರಲ್ಲಿ ಅಗತ್ಯವುಳ್ಳವರಲ್ಲಿ ಆರೋಗ್ಯ ತಪಾಸಣೆ ನಿರಂತರವಾಗಿ ನಡೆಸಬೇಕಾದುದು ಅಗತ್ಯವಾಗಿದೆ. ಕುಂದಾಪುರ ಸರಕಾರಿ ಆಸ್ಪತ್ರೆಯ ಕೋವಿಡ್ ವಿಭಾಗದ ನಿರ್ವಹಣೆ ಮಾಡುತ್ತಿರುವ ಡಾ. ನಾಗೇಶ್ , ಡಾ. ವಿಜಯಶಂಕರ್ ಅವರ ನೇತೃತ್ವದಲ್ಲಿ ಈ ಪೋಸ್ಟ್ ಕೋವಿಡ್ ಟ್ರೀಟ್‌ಮೆಂಟ್ ಅಭಿಯಾನವು ಆರಂಭಗೊಂಡಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗಭೂಷಣ ಉಡುಪ ಅವರ ಮಾರ್ಗದರ್ಶನದಂತೆ ಈ ಯೋಜನೆ ಆರಂಭಿಸಲಾಗಿದೆ. ಬಾಹ್ಯ ಚಿಕಿತ್ಸೆಗೆ ಅಗತ್ಯವಾದ ಸೌಲಭ್ಯವನ್ನು ಒದಗಿಸಲು ಗಿಳಿಯಾರು ಕುಶಲ ಹೆಗ್ಡೆ ಸ್ಮಾರಕ ಟ್ರಸ್ಟ್ ಆಸ್ಪತ್ರೆಯೊಂದಿಗೆ ಕೈ ಜೋಡಿಸಿದೆ. ಸುಮಾರು 800 ಕ್ಕೂ ಹೆಚ್ಚು ಜನರು ಇಲ್ಲಿ ಗುಣಮುಖರಾಗಿದ್ದಾರೆ.



ಕುಂದಾಪುರ ವಿಭಾಗೀಯ ಸರಕಾರಿ ಆಸ್ಪತ್ರೆಯ ಆಡಳಿತ ಶಸ್ತ್ರಚಿಕಿತ್ಸಕ ಡಾ. ರಾಬರ್ಟ್ ರೆಬೆಲ್ಲೋ ಉದ್ಘಾಟನಾ ಮಾತುಗಳನ್ನಾಡುತ್ತಿರುವುದು. ಡಾ. ನಾಗೇಶ್ ಹಾಗೂ ಡಾ.ವಿಜಯಶಂಕರ್ , ಉದಯ್ ಹೆಗ್ಡೆ ಮುಂತಾದವರಿದ್ದಾರೆ.

ಕೊರೊನಾ ಸೋಂಕಿನಿಂದ ಗುಣಮುಖರಾಗಿರುವ ಜನರಿಗೆ ಕೆಲವು ಆರೋಗ್ಯ ಸಮಸ್ಯೆಗಳು ಕಾಡುತ್ತಿರುವ ಬಗ್ಗೆ ಅವರ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿಗಳ ಸಲಹೆಯಂತೆ ಪ್ರತಿವಾರ ತಪಾಸಣೆ ನಡೆಸಿ ಅಗತ್ಯವುಳ್ಳವರಿಗೆ ಚಿಕಿತ್ಸೆ ಮುಂದುವರೆಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ.

ಗಿಳಿಯಾರು ಕುಶಲ ಹೆಗ್ಡೆ ಸ್ಮಾರಕ ಟ್ರಸ್ಟ್‌ನವರು ಅಗತ್ಯವುಳ್ಳವರಿಗೆ ಸಿಟಿ ಸ್ಕ್ಯಾನ್ ಸೇರಿದಂತೆ ಆರೋಗ್ಯ ತಪಾಸಣೆಗೆ ನೆರವು ನೀಡಲು ನಿರ್ಧರಿಸಿದ್ದು ಅನುಕೂಲವಾಗಿದೆ.

ಕುಂದಾಪುರ ವಿಭಾಗೀಯ ಆಸ್ಪತ್ರೆಯ ಆಡಳಿತ ಶಸ್ತ್ರ ಚಿಕಿತ್ಸಕರಾದ ಡಾ। ರೋಬರ್ಟ್ ರೆಬೆಲ್ಲೊ ಈ ಯೋಜನೆಗೆ ಚಾಲನೆ ನೀಡಿದರು.

"ಕೊರೊನಾ ಕಾಯಿಲೆಯಿಂದ ಗುಣಮುಖರಾದವರಿಗೆ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಈ ಯೋಜನೆಗೆ ಗಿಳಿಯಾರು ಕುಶಲ ಹೆಗ್ಡೆ ಸ್ಮಾರಕ ಟ್ರಸ್ಟ್‌ನವರು ಕೈ ಜೋಡಿಸಿರುವುದು ಉತ್ತಮ ಹೆಜ್ಜೆಯಾಗಿದೆ. ನಮ್ಮ ಕೋವಿಡ್ ವಿಭಾಗದ ನಿರ್ವಹಣೆಯ ಡಾ. ನಾಗೇಶ್, ಡಾ. ವಿಜಯಶಂಕರ್ ಹಾಗೂ ಸಿಬ್ಬಂದಿ ವರ್ಗದವರು, ಅಭಿನಂದನಾರ್ಹ ಸೇವೆ ಸಲ್ಲಿಸುತ್ತಿದ್ದು, ಗುಣಮುಖರಾದವರಿಗೆ ಅಗತ್ಯವಾದ ಮಾರ್ಗದರ್ಶನ ನೀಡುವಲ್ಲೂ ಕ್ರಮಕೈಗೊಳ್ಳುತ್ತಿದ್ದಾರೆ. ಈ ಪೋಸ್ಟ್ ಕೋವಿಡ್ ಟ್ರೀಟ್‌ಮೆಂಟ್ ಯೋಜನೆ ಯಶಸ್ವಿಗೊಳ್ಳಲಿದೆ" ಎಂದರು.

ಡಾ। ನಾಗೇಶ ಅವರು ಮಾತನಾಡಿ "ಕೊರೊನಾ ಕಾಯಿಲೆಯಿಂದ ಗುಣಮುಖರಾದವರಿಗೆ ಅವರು ವೈದ್ಯರ ಮಾರ್ಗದರ್ಶನ ನಡೆಯಬೇಕಾದು ಅಗತ್ಯವಾಗಿರುತ್ತದೆ. ನಾವು ರಕ್ತ ಪರೀಕ್ಷೆ, ಎಕ್ಸರೇ ಮುಖಾಂತರ ಪರಿಶೀಲನೆ ನಡೆಸಿ ಅಗತ್ಯ ಕಂಡಲ್ಲಿ ಸಿಟಿ ಸ್ಕ್ಯಾನ್ ಮಾಡಿಸುತ್ತೇವೆ. ಗಿಳಿಯಾರು ಕುಶಲ ಹೆಗ್ಡೆ ಟ್ರಸ್ಟ್‌ನವರು ಸಿಟಿ ಸ್ಕ್ಯಾನ್ ಸೇವಾ ರೂಪದಲ್ಲಿ ಕಾರ್ತಿಕ್ ಸ್ಕ್ಯಾನಿಂಗ್ ಸೆಂಟರ್ ಮೂಲಕ ಮಾಡಿಸಿಕೊಡಲು ಮುಂದೆ ಬಂದಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗಭೂಷಣ ಉಡುಪರ ಸಲಹೆಯಂತೆ ಈ ಯೋಜನೆ ರೂಪಿಸಲಾಗಿದ್ದು ಇದು ನೂರಾರು ಮಂದಿಗೆ ಪ್ರಯೋಜನಕಾರಿಯಾಗಲಿದೆ. ಗಿಳಿಯಾರು ಕುಶಲ ಹೆಗ್ಡೆ ಟ್ರಸ್ಟ್‌ನವರು ಶ್ಲಾಘನಾರ್ಹ ಕೆಲಸ ಮಾಡುತ್ತಿದ್ದಾರೆ" ಎಂದರು.

ಯು.ಎಸ್.ಶೆಣೈ ಸ್ವಾಗತಿಸಿ ನಿರೂಪಿಸಿದರು. ಗಿಳಿಯಾರು ಕುಶಲ ಹೆಗ್ಡೆ ಟ್ರಸ್ಟ್ ನಿರ್ದೇಶಕರಾದ ಜಿ. ಸಂತೋಷ್ ಕುಮಾರ್ ಶೆಟ್ಟಿ, ಕೆ.ನಾರಾಯಣ ಕೆ.ಕೆ.ರಾಮನ್ ಹಾಗೂ ಶ್ರೀಮತಿ ಸುಜಾತಾ ಉದಯ ಹೆಗ್ಡೆ, ಹಾಗೂ ಲಯನ್ ರಾಜೀವ್ ಕೋಟ್ಯಾನ್, ಜಿ.ಕುಶಲ ಹೆಗ್ಡೆ ಕುಟುಂಬದವರು ಉಪಸ್ಥಿತರಿದ್ದರು.

ಖಚಾಂಚಿ ಸ್ನೇಹಾ ರೈ ಯೋಜನೆ ಫಲಪ್ರದವಾಗಲೆಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕೊರೊನಾದಿಂದ ಗುಣಮುಖರಾದವರಲ್ಲಿ ಹಲವರು ತಮಗೆ ಆಸ್ಪತ್ರೆಯಲ್ಲಿ ದೊರಕಿದ ಚಿಕಿತ್ಸೆ, ತಮಗೆ ವೈದ್ಯರು, ಸಿಬ್ಬಂದಿಗಳು ತೋರಿದ ಮಾನವೀಯತೆ, ಮಾರ್ಗದರ್ಶನದ ಬಗ್ಗೆ ಕೊಂಡಾಡಿ ಅಭಿನಂದಿಸಿದರು.

# ಉಡುಪಿ ಜಿಲ್ಲೆ ಸಾಧನೆಗೆ ಸಿಕ್ಕಿತು ಮನ್ನಣೆ

ಉಡುಪಿ ಜಿಲ್ಲಾಡಳಿತ, ಸ್ಥಳೀಯ ಸಂಸ್ಥೆಗಳು ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿಗಳು, ಸ್ವಯಂ ಸೇವಾ ಸಂಘಗಳೆಲ್ಲರ ಸಹಕಾರದೊಂದಿಗೆ ಉಡುಪಿ ಜಿಲ್ಲೆಯಲ್ಲಿ ಕೊರೊನಾ ಸೋಂಕು ಗಣನೀಯ ಪ್ರಮಾಣದಲ್ಲಿ ಇಳಿಮುಖವಾದುದರಿಂದ ಉಡುಪಿ ಜಿಲ್ಲೆ ಅನ್‌ಲಾಕ್ ಆಗುವ ಅವಕಾಶ ದೊರೆತಿದೆ. ಉಡುಪಿ ಜಿಲ್ಲೆ ಶೇ. 5ರ ಆಸುಪಾಸಿನಲ್ಲಿದ್ದರೂ ಸರಕಾರದ ತಜ್ಞರ ಪಟ್ಟಿಯಲ್ಲಿ ಮನ್ನಣೆ ಸಿಗದಿರುವುದು ನಿರಾಶೆ ಉಂಟುಮಾಡಿತ್ತು.

ಈ ಬಗ್ಗೆ ಶಾಸಕ ರಘುಪತಿ ಭಟ್ ಅವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದು ಹಲವು ಸಂಘ ಸಂಸ್ಥೆಗಳೂ ಸಾರ್ವಜನಿಕರ ಸಹಕಾರಕ್ಕೆ ಕೂಡಲೇ ಮನ್ನಣೆ ದೊರಕಲಿ ಎಂದು ಆಶಯ ವ್ಯಕ್ತಪಡಿಸಿದ್ದರು.

ಜಿಲ್ಲಾಧಿಕಾರಿ ಡಾ. ಜಗದೀಶ್ ಅವರ ನೇತೃತ್ವದಲ್ಲಿ ಕೋವಿಡ್ ನಿಯಂತ್ರಣದ ಉತ್ತಮ ಅಭಿಯಾನವೇ ನಡೆದಿದ್ದು ಗ್ರಾಮಮಟ್ಟದ ಲಾಕ್‌ಡೌನ್ ಸಹ ಉತ್ತಮ ಫಲ ನೀಡಿತ್ತು. ಗ್ರಾಮಸ್ಥರೂ ಸಹಕಾರ ನೀಡಿದುದರಿಂದ ಹಲವು ಗ್ರಾಮಗಳು ಈಗಾಗಲೇ ಕೊರೊನಾ ಸೋಂಕಿನಿಂದ ಮುಕ್ತವಾಗಿದೆ.

ಕುಂದಾಪುರ ತಾಲ್ಲೂಕಿನ ಸುಮಾರು 120 ಗ್ರಾಮಗಳಲ್ಲಿ ಪ್ರತಿದಿನ 40 ರಷ್ಟು ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ಬೇರೆ ಕಾಯಿಲೆಗಳಿಗೆ ಹೋಲಿಸಿದರೆ ಈ ಸಂಖ್ಯೆ ಏನೂ ಅಲ್ಲ. ಆದರೂ ವ್ಯವಹಾರದ ಮೇಲೆ ನಿರ್ಬಂಧ ಅನಿವಾರ್ಯವಾಗಿ ಮುಂದುವರೆದಿತ್ತು. ಮಳೆಗಾಲಕ್ಕೂ ಅಗತ್ಯವಾದ ಸಾಮಾನುಗಳು, ಬಟ್ಟೆಗಳ ಖರೀದಿಗೆ ಅವಕಾಶವಿಲ್ಲವಾಗಿತ್ತು. ಈಗ ಸರಕಾರ ಉಡುಪಿ ಸೇರಿದಂತೆ ಬೆಂಗಳೂರು ಗ್ರಾಮಾಂತರ ಶಿವಮೊಗ್ಗ , ಬಳ್ಳಾರಿ, ಚಿತ್ರದುರ್ಗ , ವಿಜಾಪುರ ಜಿಲ್ಲೆಗಳಿಗೆ ಜೂನ್ 21ರ ಅನ್‌ಲಾಕ್‌ನಂತೆ ಅವಕಾಶ ಮಾಡಿಕೊಟ್ಟಿದೆ. ಮದುವೆ ಕಾರ್ಯಕ್ರಮ ಇಟ್ಟುಕೊಂಡವರು ಅನ್‌ಲಾಕ್ ಆಗದೇ ಚಡಪಡಿಸುತ್ತಿದ್ದರು.

ಜಿಲ್ಲಾಡಳಿತ ಸಾರ್ವಜನಿಕರಿಗೆ ಅನುಕೂಲವಾಗುವ ಸಹಕಾರ ನೀಡುತ್ತಿದ್ದರೂ ಸರಕಾರದ ಆದೇಶ ಪಾಲನೆಯೂ ಅನಿವಾರ್ಯವಾಗಿತ್ತು. ಸಚಿವ ಜಗದೀಶ್ ಶೆಟ್ಟರ್ ಧಾರವಾಡಕ್ಕೆ ಅನ್‌ಲಾಕ್ ವ್ಯವಸ್ಥೆ ಮಾಡಿದಂತೆ ಉಡುಪಿ ಜಿಲ್ಲೆಗೂ ಅನ್‌ಲಾಕ್ ಅವಕಾಶ ನೀಡಬೇಕು ಎಂದು ಸಾರ್ವಜನಿಕರ ಒತ್ತಾಯಕ್ಕೆ ಕೊನೆಗೂ ಮನ್ನಣೆ ದೊರಕಿದೆ. ಇಂದೂ ಸರಕಾರದ ಪ್ರಿನ್ಸಿಪಾಲ್ ಸೆಕ್ರೆಟರಿ ಎನ್.ಮಂಜುನಾಥ್ ಪ್ರಸಾದ್ ಈ ಬಗ್ಗೆ ಪರಿಷ್ಕೃತ ಆದೇಶ ಎಲ್ಲಾ ಜಿಲ್ಲೆಗಳಿಗೆ ಕಳಿಸಿದ್ದಾರೆ. ಈ ನಿಯಮದಂತೆ ಎಲ್ಲಾ ಅಂಗಡಿಗಳು ಸೇರಿದಂತೆ ಆರ್ಥಿಕ ಚಟುವಟಿಕೆಗೆ ಸಂಜೆ 5ರ ತನಕ ಅನುಮತಿ. ಹೋಟೇಲ್ ರೆಸ್ಟೋರೆಂಟ್‌ಗಳಲ್ಲಿ ಶೇ.50 ಸಾಮರ್ಥ್ಯದೊಂದಿಗೆ ಅವಕಾಶ. ಎಲ್ಲಾ ಬಸ್ ಸಂಚಾರಕ್ಕೂ ಅವಕಾಶ ಇರಲಿದೆ. ಸಾರ್ವಜನಿಕರು ಸರಕಾರದ ಈ ನಿರ್ಧಾರವನ್ನು ಸಂತೋಷದಿಂದ ಸ್ವಾಗತಿಸಿದ್ದಾರೆ.

ಸೇವೆ ಪುನರಾರಂಭಗೊಂಡಿದೆ
ಹೋಟೆಲ್ NR's ನಂದಿನಿ
ಶಿವಪ್ರಸಾದ್ ಗ್ರ್ಯಾಂಡ್ ಕಾಂಪ್ಲೆಕ್ಸ್,
ಶಾಸ್ತ್ರೀವೃತ್ತದ ಬಳಿ, ಮುಖ್ಯರಸ್ತೆ, ಕುಂದಾಪುರ
ದಿನಾಂಕ 21–06–2021ರಿಂದ ನಮ್ಮಲ್ಲಿ ಊಟ ಉಪಹಾರದ ಸೇವೆ ಪ್ರಾರಂಭಗೊಂಡಿದ್ದು ಪಾರ್ಸಲ್ ಸೇವೆ, ಹೋಂ ಡೆಲಿವರಿ ವ್ಯವಸ್ಥೆ ಸಹ ಇದೆ.
ಈ ಕೆಳಗಿನ ದೂರವಾಣಿ ಸಂಖ್ಯೆ ಸಂಪರ್ಕಿಸಿ.
ಸೌತ್ ಇಂಡಿಯನ್, ನಾರ್ತ್ ಇಂಡಿಯನ್ ಖಾದ್ಯಗಳ
ಸರಬರಾಜು ಮಾಡಲಾಗುವುದು.
9448964278
9739658190, 9741849020
7013816818